ಅಪವಿತ್ರಗೊಳಿಸಿದ ಅಥವ ಆ ಮೂಲಕ ಬಿಡುಗಡೆಯಾಗಿಸಿದ ಸಂಕಟದ ಸ್ಫೋಟಕ ದಿನಗಳು ಅವು. ಭಯ, ಬಯಕೆ, ಹಸಿವು, ಹಿಂಸೆ, ಕಾಮ ನನ್ನೊಳಗೆ ಜ್ವಲಿಸುತ್ತಿದ್ದ ಆದಿಮ ಪ್ರವೃತ್ತಿಗಳ ಪ್ರತಿಮಾ ಜಗತ್ತಿನ ರುಚಿ ಹತ್ತಿದ ರೋಚಕ ಕಾಲ ಅದು; ಈ ಕಾಡೆಂಬ ಅಂಧಕ ಉರಿ ಪದಾರ್ಥ ಧಾರವಾಡದ ನನ್ನ ವಿದ್ಯಾರ್ಜನೆಯ ಪರಿಸರದಲ್ಲಿ ಸಾಹಿತ್ಯ ರಚನೆಯ ಬೆಳಕಿನ ಅಭಿವ್ಯಕ್ತಿಗೆ ಇಂಧನವಾಗಿ ಪ್ರಕಟವಾಯಿತು; ಅಸ್ವಸ್ಥ, ಅರಾಜಕ ಅನುಭವಗಳಿಗೆ ಬೆಳಕಾಗುವ ಭಾಗ್ಯ ಪ್ರಾಪ್ತವಾಗದಿದ್ದರೆ ನನ್ನೊಳಗಿನ ಉರಿ ನನ್ನನ್ನು ಸುಟ್ಟು ಭಸ್ಮ ಮಾಡುತ್ತಿತ್ತೇನೊ; ನನ್ನ ಅದೃಷ್ಟ, ರೇಷ್ಮೆಯ ಗೂಡನ್ನು ಒಡೆದು ಹೊಸ ವಿಶ್ವಕ್ಕೆ ಹಾರಿದ ಪಾತರಗಿತ್ತಿ ನಾನಾದೆ.

◆ **ಹಾಗಾದರೆ ಧಾರವಾಡದ ವಿದ್ಯಾಭ್ಯಾಸದ ದಿನಗಳು ನಿಮ್ಮನ್ನು ಕತೆಗಾರನಾಗಿಸಿದವು ಅಲ್ಲವೇ?**

ನನ್ನೊಳಗಿನ ಸುಪ್ತ ಕಥಾಬೀಜಕ್ಕೆ ಧಾರವಾಡದ ಫಲವತ್ತಾದ ಮಣ್ಣು ದೊರೆತದ್ದು ಹೌದು. ಬಾಡಿಗೆ ಖೋಲಿಯ, ಕೈಅಡುಗೆಯ, ರೊಟ್ಟಿ ತಟ್ಟುವ ಸಪ್ಪಳದ ಓಣಿಗಳ, ಕಂಪೌಂಡಿನೊಳಗಿನ ಮಾವಿನ ಮರದಲ್ಲಿ ಹುದುಗಿ ಹಾಡುವ ಕೋಗಿಲೆಯ, ಎಲ್ಲಿ ನೋಡಿದರೂ ಹಾಸ್ಟೆಲಿನ 'ಪಾರ್ಟ್‌ನರ್ಸ್' ತುಂಬಿರುವ ಧಾರವಾಡ ನನಗೆ ನಾನು ಹಾದು ಬಂದ ಬಾಲ್ಯದ ಸ್ಮೃತಿಗಳನ್ನು ಹೊಸ ರೀತಿಯಲ್ಲಿ ಸಂಯೋಜಿಸಿಕೊಡುವ, ವರ್ತಮಾನವನ್ನು ಉದ್ದೀಪಿಸುವ ಮಾನವೀಯ ಮಾಯಾ ನಗರವಾಗಿ ತೆರೆದುಕೊಂಡಿತು. ಪ್ರಾಥಮಿಕ ಶಾಲೆಯ ಕನ್ನಡ ಪಠ್ಯದ ಬೇಂದ್ರೆಯವರ ಕವಿತೆ ಮತ್ತು ಮನೆಯ ಗೋಡೆ ಕಪಾಟಿನ ರೇಡಿಯೊ ಪ್ರಸಾರಮಾಡುತ್ತಿದ್ದ ಆಕಾಶವಾಣಿ ಕಾರ್ಯಕ್ರಮಗಳ ಮೂಲಕ ಧಾರವಾಡ ಅದಾಗಲೆ ನನ್ನೊಳಗೆ ತರಂಗಾಂತರ ಪರಿಚಯದ ಅಲೆಯನ್ನು ಎಬ್ಬಿಸಿತ್ತು. ವಿಶ್ವವಿದ್ಯಾಲಯದ ಗಡಿಯಾರ ಗೋಪುರ, ಬಾನ ನೀಲಿಯನ್ನು ಚುಚ್ಚಿದ ಆಕಾಶವಾಣಿಯ ಸ್ತಂಭ,



ಕತೆಯಲ್ಲಿ ನಡೆಯುವ ವಿಸ್ಮಯ ಏನೆಂದರೆ ಪಾತ್ರಗಳು ಹೋಲಿಕೆಯಲ್ಲಿ ನಿಜ ಜೀವನದ ವ್ಯಕ್ತಿಗಳಾಗಿರಬಹುದು; ಘಟನೆ ನಾವು ನೋಡಿದ್ದೇ ಇದ್ದಿರಬಹುದು; ಭೌತಿಕ ವಿವರಗಳು ಅವೇ ಪರಿಚಿತ ಸಂಗತಿಗಳಾಗಿರಬಹುದು; ಆದರೆ, ವ್ಯಾವಹಾರಿಕ ತರ್ಕವನ್ನು ಮುರಿಯುವ ಅವುಗಳ ಸಂಯೋಜನೆ ಕಲ್ಪಿತ; ಸಂಯೋಜಿತ ಕಲ್ಪಿತ ಕತೆ ಮರಳಿ ಜೀವನದ ಸತ್ಯವಾಗಿಬಿಡುತ್ತದೆ!